ಬೆಂಗಳೂರು ಸಬ್ ಜಡ್ಜ ರವರ ಕೋರ್ಟಿನಲ್ಲಿ.

ಸ॥ 1908—09ನೆ ಇಸವಿ ಮಿ॥ ಅರ್ಜಿ ನಂಬರ್ 806.

ಬೆಂಗಳೂರು ಕಲಾಸಿಪಾಳ್ಯದಲ್ಲಿದ್ದು ಛವತಿಪಟ್ಟ ಜುಂಜೆಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಕಲಾಸಿಪಾಳ್ಯದಲ್ಲಿರುವ ತಿಗಳರ ನಂಜುಂಡಪ್ಪನ ಮಗ ಚಿಕ್ಕತಾಯಪ್ಪನು, ಮೃತಪಟ್ಟ ಸದರೀ ಜುಂಜೆಗೌಡನಿಗೆ ಮುಖ್ಯ ವಾರಸ್ದಾರನಾಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಜುಂಜೆಗೌಡನ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಿಕ್ಕತಾಯಪ್ಪನ ಅರ್ಜಿಯೆನ್ನು 1909ನೆ ಇಸವಿ ಜೂ॥ 4ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜುಂಜೆಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ॥ 1909ನೆ ಇಸವಿ ಏಪ್ರೆಲ್ 16ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ॥ 1908—09ನೆ ಇಸವಿ ಮಿ॥ ಅರ್ಜೀ ನಂಬರ್ 844.

ಅರ್ಜೀದಾರ್ರು ಮೈಸೂರು ಕೋಟೆಲಿರುವ ಸುಬ್ಬರಾಯರ ಹೆಂಡತಿ ತುಳಶಿಬಾಯಿ ಉರಫ್ ಭಾಗೀರಥಿಬಾಯಿ, ಮೈನರಾದ ಕೇಶವಮೂರ್ತಿ ಮೈಸೂರು ಸ್ಥಳದ ಛವತಿ ತುಳಶಿಬಾಯಿರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಕೇಶವಮೂರ್ತಿಗೆ ಮುಖ್ಯ ವಾರಸುದಾರ ಆಗಬೇಕೆಂಬ ಹಕ್ಕಿನಮೇಲೆ ಅರ್ಜಿದಾರಳು ಸದರೀ ಮೈನರಿನ ಆಸ್ತೀ ಕಾಪಾಡುವುದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜೀ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ॥ 1909ನೆ ಇಸವಿ ಜೂ॥ ತಾರೀಖು 11ರಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿಧೆ.

ಸ॥ 1909ನೆ ಇಸವಿ ಏಪ್ರೆಲ್ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ॥ 1908—09ನೆ ಇಸವಿ ಮಿ॥ ಅರ್ಜಿ ನಂಬರ್ 854.

ಅರ್ಜಿದಾರರು ಚಿಕ್ಕವುಗಳೂರಲ್ಲಿರುವ ನಾರಣ್ಯೆಯೆಂಗಾರ್ರ ಹೆಂಡತಿ ರುಕ್ಕಮ್ಮ, 2ನೆ ಆನೆಕಲ್ ತಾಲ್ಲೂಕಿನಲ್ಲಿ ಎಕ್ಸೈಜ್ ಇನ್‌ಸ್ಪೆಕ್ಟರಾಗಿರುವ ಬಿ. ಆರ್. ಕೇಶವಾಚಾರ್ರು, ಮೈನರಾದ ಬೆಂಗಳೂರು ಸ್ಥಳದ 1ನೆ ಕೀತಮ್ಮ, 2ನೆ ಮೂರ್ತಿಅಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಕೀತಮ್ಮ ವಗೈರೇರಿಗೆ ಮುಖ್ಯ ವಾರಸ್ದಾರ್ರು ಆಗಬೇಕೆಂಬ ಹಕ್ಕಿನಮೇಲೆ ಅರ್ಜಿದಾರ್ರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ॥ 1909ನೆ ಇಸವಿ ಜೂ॥ ತಾರೀಖು 11ರಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ॥ 1909ನೆ ಇಸವಿ ಏಪ್ರೆಲ್ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ

ಸ॥ 1908-09ನೆ ಇಸವಿ ಮಿ॥ ಅರ್ಜೀ ನಂಬರ್ 881.

ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷ್ ಧರ್ಮರಾಜ ಸ್ಟ್ರೀಟಿನಲ್ಲಿದ್ದು ಛವತಿಪಟ್ಟ ತಿರುನಾರಣಭಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್‌ನಲ್ಲಿರುವ ಅರ್ಚಿಕ ತಿರುನಾರಣಭಟ್ಟರ ಹೆಂಡತಿ ರಂಗಮ್ಮ, ಮೃತಪಟ್ಟ ಸದರಿ ತಿರುನಾರಣ ಭಟ್ಟರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ತಿರುನಾರಣ ಭಟ್ಟರ ಜೆಂದಗಿ ಬಗ್ಯಾಗಿ ಬರತಕ್ಕ 345 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರಟಿಫಿಕೇಟ್ ಬಗ್ಯೆ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಂಗಮ್ಮನ ಅರ್ಜಿಯನ್ನು ಸ॥ 1909ನೆ ಇಸವಿ ಜೂ॥ 18ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿರುನಾರಣಭಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ॥ 1909ನೆ ಇಸವಿ ಏಪ್ರೆಲ್ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ಇ. ಜಯರಾಮಯ್ಯರ್,
ಸಬ್ ಜಡ್ಜ್.